# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| (1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 262 |
| (2) | ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| (3) | ಉತ್ತರಿಸಬೇಕಾದ ದಿನಾಂಕ | 06.07.2023 |
| (4) | ಉತ್ತರಿಸುವ ಸಚಿವರು | ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಹೈಕೋರ್ಟ್, ಟ್ರಿಬ್ಯೂನಲ್ ಹಾಗೂ ಇತರೆ ಕೆಳಹಂತದ ನ್ಯಾಯಾಲಯಗಳಲ್ಲಿ ಬಾಕಿಯಿರುವ ಪ್ರಕರಣಗಳೆಷ್ಟು; (ನ್ಯಾಯಾಲಯವಾರು ಮತ್ತು ವರ್ಷವಾರು ಮತ್ತು ಹಂತವಾರು ಪೂರ್ಣ ಮಾಹಿತಿ ನೀಡುವುದು); | ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಉಚ್ಚ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯ ಮತ್ತು ಟ್ರಿಬ್ಯೂನಲ್‌ಗಳಲ್ಲಿ ಬಾಕಿ ಇರುವ ನ್ಯಾಯಾಲಯ ಪ್ರಕರಣಗಳ ವಿವರಗಳು:- |

**ಕರ್ನಾಟಕ ಉಚ್ಚ ನ್ಯಾಯಾಲಯ**

| ವರ್ಷ | ದಾಖಲಾದ ಪ್ರಕರಣಗಳು | ವಿಲೇಯಾದ ಪ್ರಕರಣಗಳು | ಬಾಕಿ ಪ್ರಕರಣಗಳು |
|---|---|---|---|
| 2020 | 138954 | 161150 | 249733 |
| 2021 | 86669 | 89989 | 246413 |
| 2022 | 103220 | 85399 | 264234 |
| 2023 (ಮೇ ವರೆಗೆ) | 44590 | 37236 | 271588 |

**ಜಿಲ್ಲಾ ನ್ಯಾಯಾಲಯ**

| ವರ್ಷ | ದಾಖಲಾದ ಪ್ರಕರಣಗಳು | ವಿಲೇಯಾದ ಪ್ರಕರಣಗಳು | ಬಾಕಿ ಪ್ರಕರಣಗಳು |
|---|---|---|---|
| 2020 | 1138553 | 960883 | 1702013 |
| 2021 | 1918948 | 1847509 | 1772745 |
| 2022 | 1870 532 | 1786764 | 1856513 |
| 2023 (ಮೇ ವರೆಗೆ) | 564744 | 524441 | 1896816 |

**ಟ್ರಿಬ್ಯೂನಲ್‌ಗಳು (ವಕ್ಫ್, ಕೈಗಾರಿಕಾ ಮತ್ತು ಹೆಚ್ಚುವರಿ ಕೈಗಾರಿಕಾ ನ್ಯಾಯಮಂಡಳಿಗಳು)**

| ವರ್ಷ | ದಾಖಲಾದ ಪ್ರಕರಣಗಳು | ವಿಲೇಯಾದ ಪ್ರಕರಣಗಳು | ಬಾಕಿ ಪ್ರಕರಣಗಳು |
|---|---|---|---|
| 2020 | 1278 | 736 | 7207 |
| 2021 | 2109 | 1259 | 8057 |
| 2022 | 1917 | 1660 | 8314 |
| 2023 | 878 | 1129 | 8063 |

| | | | |
|---|---|---|---|
| (ಮೇ ವರೆಗೆ) | | | |

**ಕರ್ನಾಟಕ ರಾಜ್ಯ ಸಾರಿಗೆ ಮೇಲ್ಮನವಿ ನ್ಯಾಯಮಂಡಳಿ**

| ವರ್ಷ | ದಾಖಲಾದ ಪ್ರಕರಣಗಳು | ವಿಲೇಯಾದ ಪ್ರಕರಣಗಳು | ಬಾಕಿ ಪ್ರಕರಣಗಳು |
|---|---|---|---|
| 2020 | 237 | 233 | 495 |
| 2021 | 204 | 597 | 102 |
| 2022 | 350 | 276 | 176 |
| 2023 (ಜೂನ್ ವರೆಗೆ) | 97 | 78 | 195 |

**ಕರ್ನಾಟಕ ಆಡಳಿತ ನ್ಯಾಯಮಂಡಳಿ**

| ವರ್ಷ | ದಾಖಲಾದ ಪ್ರಕರಣಗಳು | ವಿಲೇಯಾದ ಪ್ರಕರಣಗಳು | ಬಾಕಿ ಪ್ರಕರಣಗಳು |
|---|---|---|---|
| 2020 | 11864 | 8391 | 16820 |
| 2021 | 11897 | 16725 | 12472 |
| 2022 | 10006 | 14202 | 8612 |
| 2023 (ಮೇ ವರೆಗೆ) | 4235 | 6543 | 6219 |

ಆ) ರಾಜ್ಯದಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಶೇಕಡಾ 50 ರಷ್ಟು ಪ್ರಕರಣಗಳಲ್ಲಿ ರಾಜ್ಯ ಸರ್ಕಾರವು ಎದುರು ಪಾರ್ಟಿಗಳು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸರ್ಕಾರದ ವಿರುದ್ಧ ಬಾಕಿ ಇರುವ ಪ್ರಕರಣಗಳ ಸಂಖ್ಯೆ:-

**ಕರ್ನಾಟಕ ಉಚ್ಚನ್ಯಾಯಾಲಯ**

| ವರ್ಷ | ಬಾಕಿ ಪ್ರಕರಣಗಳು (ರಾಜ್ಯ ಸರ್ಕಾರದ ವಿರುದ್ಧ ದಾಖಲಾದ ಪ್ರಕರಣಗಳು) |
|---|---|
| 2020 | 11839 |
| 2021 | 12639 |
| 2022 | 13767 |
| 2023 (ಏಪ್ರಿಲ್ ವರೆಗೆ) | 14620 |

**ಜಿಲ್ಲಾ ನ್ಯಾಯಾಲಯ**

(ಜಿಲ್ಲಾವಾರು ಬಾಕಿ ಇರುವ ಪ್ರಕ್ರಣಗಳ ವಿವರವನ್ನು **ಅನುಬಂಧದಲ್ಲಿ** ಲಗತ್ತಿಸಲಾಗಿದೆ).

| ವರ್ಷ | ಬಾಕಿ ಪ್ರಕರಣಗಳು (ರಾಜ್ಯ ಸರ್ಕಾರದ ವಿರುದ್ಧ ದಾಖಲಾದ ಪ್ರಕರಣಗಳು) |
|---|---|
| 2020 | 52952 |
| 2021 | 62746 |
| 2022 | 63901 |
| 2023 (ಮೇ ವರೆಗೆ) | 74558 |

| | | |
|---|---|---|
| ಇ) | ರಾಜ್ಯ ಸರ್ಕಾರದ ಬಹುತೇಕ ಪ್ರಕರಣಗಳಲ್ಲಿ ಪಾರ್ಟಿ ಸವಾಲಿಗೆ ಅಗತ್ಯವಿರುವ ಅಫಿಡೆವಿಟ್ ಪ್ರಮಾಣಿಕರಿಸಿದ ಉತ್ತರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸದಿರುವುದರಿಂದ ಪ್ರಕರಣಗಳು ಇತ್ಯರ್ಥವಾಗದೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಜಿಲ್ಲಾ ನ್ಯಾಯಾಲಯಗಳಲ್ಲಿ ಸರ್ಕಾರದ ವಿರುದ್ಧ ದಾವೆ ಸಲ್ಲಿಸಿದಾಗ ನೋಟೀಸ್ ಜಾರಿಯಾದ 30 ದಿನಗಳೊಳಗೆ ಹಾಗೂ ನ್ಯಾಯಾಲಯದ ಅನುಮತಿಯಿಂದ 90 ದಿನಗಳೊಳಗೆ ಸಿವಿಲ್ ಪ್ರಕರಣಗಳಲ್ಲಿ ಪ್ರತಿವಾದಿ ಪತ್ರ ಸಲ್ಲಿಸಬೇಕಾಗುತ್ತದೆ. ವಾದ ಪತ್ರ ಮತ್ತು ಪ್ರತಿವಾದ ಪತ್ರಗಳನ್ನು ಪರಿಗಣಿಸಿ ನ್ಯಾಯಾಲಯವು ವಿವಾದಾಂಶಗಳನ್ನು ರಚಿಸಿದ ನಂತರ ವಾದಿ ತನ್ನ ಪರವಾಗಿರುವ ಸಾಕ್ಷಿ ನೀಡಬೇಕಾಗಿರುತ್ತದೆ. ಅನಂತರ ಪ್ರತಿವಾದಿಯಾದ ಸರ್ಕಾರ ನ್ಯಾಯಾಲಯವು ನಿಗಧಿಪಡಿಸಿದ ದಿನಾಂಕದಿಂದ ಮುಖ್ಯ ವಿಚಾರಣೆ ಅಫಿಡವಿಟ್‌ನ್ನು ಸಲ್ಲಿಸಬೇಕಾಗುತ್ತದೆ. ಹಾಗಾಗಿ ದಾವೆ ಸಲ್ಲಿಸಿದ ದಿನಾಂಕದಿಂದ ಇಂತಿಷ್ಟೇ ದಿನದಲ್ಲಿ ಪ್ರತಿವಾದಿ ಮುಖ್ಯ ವಿಚಾರಣೆಯ ಸಾಕ್ಷಿ ಎಂದು ಪ್ರಮಾಣ ಪತ್ರ ಸಲ್ಲಿಸಲು ನಿಗಧಿತ ಅವಧಿ ಇರುವುದಿಲ್ಲ. ಕರ್ನಾಟಕ ಉಚ್ಚ ನ್ಯಾಯಾಲಯವು ರಚಿಸಿದ Case Flow Management Rules ಪ್ರಕಾರ ಜಿಲ್ಲಾ ನ್ಯಾಯಾಲಯಗಳ ಮುಂದೆ ಬರುವ ಸಿವಿಲ್ ಪ್ರಕರಣಗಳನ್ನು Track –I ರಿಂದ Track –IV ಎಂದು ವಿಂಗಡಿಸಿ Track–I ರ ಪ್ರಕಾರ 9 ತಿಂಗಳಿಂದ 24 ತಿಂಗಳುಗಳ ಅವಧಿಯಲ್ಲಿ ಸಂಪೂರ್ಣ ಪ್ರಕರಣವನ್ನು ಮುಕ್ತಾಯಗೊಳಿಸುವ ನಿರ್ದೇಶನ ಇರುತ್ತದೆ. ಈ ನಿಯಮಗಳು ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ದಾಖಲಾಗುವ ರಿಟ್ ಅರ್ಜಿಗಳಿಗೆ ಅನ್ವಯವಾಗುವುದಿಲ್ಲ. |
| ಈ) | ಹಾಗಿದ್ದಲ್ಲಿ,ನ್ಯಾಯಾಲಯಗಳಲ್ಲಿ ನಿಗದಿತ ಕಾಲದಲ್ಲಿ ಅಫಿಡೆವಿಟ್/ ಪ್ರಮಾಣೀಕರಿಸಿದ ಉತ್ತರಗಳನ್ನು ಸಲ್ಲಿಸಿ, ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸರ್ಕಾರ ಮತ್ತು ರಾಜ್ಯದ ಹೈಕೋರ್ಟ್ ನಿಗದಿಪಡಿಸಿರುವ ಕಾಲಮಿತಿ ಏನು; ಹಾಗೂ ಬಾಕಿಯಿರುವ ಪ್ರಕರಣಗಳ ಉಸ್ತುವಾರಿ ಮಾಡಲು ಬಳಸುತ್ತಿರುವ ಸಾಧನ ವಿಧಾನಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸಿಸಿಎಂಎಸ್ ತಂತ್ರಾಂಶದ ಮೂಲಕ ಆಯಾ ಇಲಾಖೆಯ ಅಧಿಕಾರಿಗಳು ಉಸ್ತುವಾರಿ ಮಾಡುತ್ತಿರುತ್ತಾರೆ. |

**ಸಂಖ್ಯೆ: ಲಾ-ಎಲ್‌ಎಸಿ/102/2023**

**(ಹೆಚ್.ಕೆ.ಪಾಟೀಲ್)**
**ಕಾನೂನು, ಸಂಸದೀಯ ವ್ಯವಹಾರಗಳು**
**ಮತ್ತು ಶಾಸನ ರಚನೆ ಹಾಗೂ**
**ಪ್ರವಾಸೋದ್ಯಮ ಸಚಿವರು**